

ನೋಡಿದ ವನಮಾಲ ಮನೆ–ಮನ ತುಂಬಿದ್ದಳು. ಓದಿದ್ದು ಕಡಿಮೆಯಾದರೂ ತಿಳಿವಳಿಕೆ ಅಪಾರ ಇದ್ದ ಅವಳಿಗೆ ರಾಹುಲ ಸದಾ 'ಯಾಕೆ ಹೆಚ್ಚು ಓದಲಿಲ್ಲ?' ಅನ್ನುವ ಪ್ರಶ್ನೆಗೆ ವನಮಾಲ ನಕ್ಕು ಮೌನವಾಗುತ್ತಿದ್ದಳು. ಅವಳು ಮೂಕಿಯಂಥಾ ಜೀವ, ಇವನು ಅಷ್ಟು ಇಷ್ಟು ಮಾತಿನ ಆಸಾಮಿ. ಸಂಸಾರ ಗುಲಾಬಿ ಪಕಳೆ ಮೇಲಿನ ಜೇನಿನ ಹನಿಯಂತೆ ಸಾಗಿ ಮಗಳು ಪಾವನಿಯ ಪ್ರವೇಶ ರಾಹುಲನ ಜೀವವೇ ಆಗಿಹೋಗಿ ಸಂಸಾರ ಸವಿ ದುಪ್ಪಟ್ಟಾಗಿತ್ತು.

ಇತ್ತೀಚಿನ ವನಮಾಲಳಿಂದಾಗಿ ರಾತ್ರಿಗಳು ಸಂಸಾರ ತಾಳತಪ್ಪಿದ ಹಾಡುಗಳಾಗಿದ್ದು ರಾಹುಲನಿಗೆ ಉತ್ತರವಿಲ್ಲದ ಪ್ರಶ್ನೆಯಾಗಿತ್ತು.

ಕಾಲೇಜಿನ ಮಿಂಚಿನ ಬಗ್ಗೆ ಮದುವೆಯಾದ ಹೊಸತರಲ್ಲಿ ಯಾವುದೋ ಭರದಲ್ಲಿ ಬಾಯಿಬಿಟ್ಟಿದ್ದ ರಾಹುಲ. ಅದೊಂದು ಮಾಹಿತಿ ದುಬಾರಿಯಾಗಿ ವನಮಾಲಳಿಂದ ಬಹಳ ಯಾತನೆ ಅನುಭವಿಸಿದ್ದ. ಮಾತು ಮಾತಿಗೂ ಆ ಮಿಂಚನ್ನು ಉದಾಹರಿಸಿ, ಮೂದಲಿಸಿ ಮಾತನಾಡುತ್ತಿದ್ದಳು. ರಾಹುಲನ ಮನಸ್ಸು ಒಮ್ಮೊಮ್ಮೆ ರೈಲಡಿಯ ನಾಣ್ಯವಾಗುತ್ತಿತ್ತು.

ಮಗಳ ಆಗಮನದಿಂದ ಮಿಂಚಿನ ಸುದ್ದಿ ಕಣ್ಮರೆಯಾಯಿತು. ಇಬ್ಬರ ಬಾಳಲ್ಲಿ ಸಿಹಿಗಾಳಿ ತಂದಿದ್ದಳು ಮಗಳು. ಆದರೆ ಮಗಳು ಬೆಳೆದಂತೆ ಒಳಕೋಣೆಯ ಇನಿದನಿಯ ಹಾಡು ಕರ್ಕಶವಾಗತೊಡಗಿದ್ದೇ ರಾಹುಲನಿಗೆ ಪ್ರಶ್ನಾರ್ಥಕ ಚಿನ್ಹೆಯಾಗಿ ಕೊರಳ ಸುತ್ತಿತ್ತು!

ರಾಹುಲ ಮನೆಯಲ್ಲಿ ಮಗಳ ಸಂಗ, ಮನೆಯ ಹೊರಗಡೆಯಲ್ಲಿ ಒಂಟಿ. ಒಳ್ಳೆಯ ಹುದ್ದೆ, ಸಂಬಳ. ಒಂದೂ ಚಟವಿಲ್ಲ.

ಪಾವನಿ ಬಂದ ಮೂರನೇ ವರ್ಷದ ಹುಟ್ಟುಹಬ್ಬ ಜೋರಾಗಿ ಮಾಡುವ ಪ್ಲಾನ್ ಮಾಡಿದರು ಇಬ್ಬರೂ. ಅವಳು ಅವಳ ಕಡೆಯವರನ್ನು, ಇವನು ಗೆಳೆಯರ ಬಳಗ, ಸ್ಟಾಫ್‌ನವರನ್ನು ಕರೆದ. ದಾವಣಗೆರೆಯ ಚೇತನ ಹೋಟೆಲಿನ ಹಾಲ್ ಬುಕ್ ಮಾಡಿದ್ದ. ಭಫೆ ಊಟದ ವ್ಯವಸ್ಥೆ. ಬಲೂನ್‌ಗಳಲ್ಲಿ ಸ್ವರ್ಗದ ಛಾಯೆ ಹಾಲ್‌ನಲ್ಲಿ ತುಂಬಿತ್ತು. ವನಮಾಲ ಎಂದಿಗಿಂತ ಗ್ರಾಂಡಾಗಿ ಕಾಣುತ್ತಿದ್ದಳು. ರಾಹುಲ ಅವನ ಮೆಚ್ಚಿನ ಕಾಫಿ ಬಣ್ಣದ ಸಫಾರಿ ಹಾಕಿ ಮದುಮಗನಾಗಿದ್ದ. ಪಾವನಿ ಫೇಟ್ ಸಿಂಡ್ರೆಲ್ಲಾ ಆಗಿದ್ದಳು. ಕಾರ್ಯಕ್ರಮ ಶುರುವಾಯಿತು. ಬಂದವರೆಲ್ಲಾ ಮಗುಗೆ ವಿಶ್ ಮಾಡಿ ಭೋಜನದತ್ತ ತೆರಳುತ್ತಿದ್ದರು. 'ಆಕಾಶ ದೀಪವು ನೀನು, ನಿನ್ನ ಕಂಡಾಗ ಸಂತೋಷವೇನು...' ಹಾಡು ಸಣ್ಣದಾಗಿ ಕೇಳುತ್ತಿತ್ತು.

ಗಂಡ ಹೆಂಡತಿ ಪಾವನಿ ಅಕ್ಕಪಕ್ಕ ನಿಂತು ನಗ್ತಾ, ಬಂದವರ ಬಳಿಯ ಉಡುಗೊರೆ ಪಡೆದು ಫೋಟೋಗೆ ಪೋಸು ಕೊಟ್ಟು ಊಟಕ್ಕೆ ಕಳಿಸುತ್ತಿರುವಾಗಲೇ ಒಬ್ಬ ಹೆಣ್ಣುಮಗಳ ಪ್ರವೇಶವಾಯಿತು. ದಟ್ಟ ನೀಲಿ ರೇಷ್ಮೆ ಸೀರೆ ಉಟ್ಟು, ಉದ್ದನೆಯ ಜಡೆಯಲ್ಲಿ ಸಿಕ್ಕಿಸಿದ್ದ ದುಂಡುಮಲ್ಲಿಗೆ ಹೂ ರಾಶಿ ಹಿಂದಿನಿಂದ ಮುಂದಿನ ಭುಜಕ್ಕೆ ಬಂದಿತ್ತು. ಒಂದು ಕೈಯಲ್ಲಿ ಟೆಡ್ಡಿಬೇರ್ ಹಿಡಿದಿದ್ದಳು. ಬಗಲಲ್ಲಿ ಜಂಬದಚೀಲ. ಮತ್ತೊಂದು ಕೈಯಲ್ಲಿ ಸೆರಗ ತುದಿ ಹಿಡಿದು ಬಂದಳು. ಅಲ್ಲಿದ್ದವರೆಲ್ಲಾ ಆ ಸುಂದರಿಯನ್ನು ಎವೆಯಿಕ್ಕದೇ ನೋಡುತ್ತಿದ್ದರು. ಬಂದವಳೇ 'ಹಾಯ್ ವನಮಾಲಾ, ಹೇಗಿದ್ದೀರಿ? ನಾನು ನಿಮ್ಮ ಯಜಮಾನರ ಸಹಪಾಠಿ. ಇದೀಗ ನಮಗೆ ದಾವಣಗೆರೆಗೆ ವರ್ಗ ಆಯಿತು. ಮೊನ್ನೆ ನಮ್ ಹಳೆಯ ಗೆಳತಿಯಿಂದ ಈ ವಿಚಾರ ಗೊತ್ತಾಗಿ ಸರ್‌ಪ್ರೈಸ್ ಅಂತ ಬಂದೆ, ಸಾರಿ...' ಅನ್ನುತ್ತಲೇ ಬೊಂಬೆ ಪಾವನಿ ಕೈಗಿತ್ತು, ಕೆನ್ನೆಗೆ ಮುತ್ತಿಟ್ಟು ಫೋಟೋಗಾಗಿ ರಾಹುಲನ ಪಕ್ಕ ನಿಂತಳು. ರಾಹುಲನ ಎದೆ ಶತಾಬ್ದಿಯಾಗಿತ್ತು. ಯಾವ ಮಿಂಚು ಮಾಯವಾಗಿತ್ತೋ, ಯಾವ ಮಿಂಚಿನ ಬರಿದೇ ಹೆಸರಿನ ಕಾರಣದಿಂದ ವನಮಾಲ ಮೌನವಾಗಿದ್ದಳೋ, ಯಾವ ಮಿಂಚು ವಿನಾಕಾರಣ ಕೆಲದಿನಗಳ ಕಾಲ ನಮ್ಮೊಳಗೆ ಅಲೆದಾಡಿದ್ದಳೋ ಅವಳು ಇದೀಗ ಧುತ್ತನೆ ಎದುರಾಗಿದ್ದು ಶೇಂಗಾ ಸುಲಿದು ತಿನ್ನುವಾಗ ಕಹಿ ಕಾಳು ಬಾಯಿಗೆ ಸಿಕ್ಕಂತಾಗಿತ್ತು. ಮಿಂಚು ಭಫೆ ಕಡೆ ನಡೆದಳು. ವನಮಾಲ ರಾಹುಲನತ್ತ ತಿರುಗಿ 'ಮಿಂಚು..?' ಅಂದಳು ಪ್ರಶ್ನಾರ್ಥಕವಾಗಿ. ಉಗುಳು ನುಂಗುತ್ತಾ ರಾಹುಲ ಹೌದೆಂಬಂತೆ ಗೋಣು ಹಾಕಿದ. ವನಮಾಲ ನಕ್ಕಳು. ಆ ನಗುವಿನಲ್ಲಿ ರಾಹುಲನೆದೆಗೆ ನೂರು ಸೂಜಿ ಒಮ್ಮೆಲೆ ಚುಚ್ಚಿದ ವ್ಯಂಗ್ಯವಿತ್ತು. ಮನೆ ಮೂರುದಿನ ಮಸಣಮೌನ. ಮಗಳ ಹೊರತು ಮೂಗಿನ ಹೊರಳೆಗಳಷ್ಟೇ ಉಸಿರಾಡಿದ್ದು. ಮಾತು ಮರೆತ ಮನೆ ಅದಾಗಿತ್ತು. ಇಬ್ಬರೂ ಗೂಟ ನುಂಗಿದವರಂತೆ ಬಿಗುಮಾನದಿ ಬದುಕಿಬಿಟ್ಟರು. ಊಟ–ನಿದ್ದೆ ಯಾಂತ್ರಿಕವಾದವು.

'ಮೊದಲೇ ನಿಮಗೆ ಅವಳ ಬಗ್ಗೆ ಗೊತ್ತಿತ್ತು'.

'ನಾ ಕಾಲೇಜಿನ ನಂತರ ಅವಳನ್ನು ನೋಡಿದ್ದೇ ಇಂದು'.

'ನಂಬಲಾಗುತ್ತಿಲ್ಲ'.

'ನಂಬಬೇಕು, ಬೇರೆ ದಾರಿಯಿಲ್ಲ, ಇದು ನಮ್ಮ ಬದುಕು'.

'ಸತ್ತ ಪ್ರೀತಿಗೆ ಜೀವ ಬರುತ್ತೇನೋ...'

'ಉತ್ತರ ನೀನೇ ಹೇಳಿದೆಯಲ್ಲಾ? ಸತ್ತದ್ದದು. ಅಲ್ಲದೆ ಒನ್ ವೇ ಅಷ್ಟೇ ಅದು. ಪ್ರೌಢರಲ್ಲದವರ ಬರಿದೇ ಒಣ ಒಡನಾಟವದು'.

'ಬೇರುಳಿದರೆ ಸಾಕು, ಮೋಟು ಕಾಂಡ ಕೂಡ ಕೊನರುತ್ತೆ, ಸತ್ತ ಪ್ರೀತಿ ಜೀವನ್ಮುಖಿಯಾಗುವುದರಲ್ಲಿ ಅಚ್ಚರಿಯಿಲ್ಲ...' ವನಮಾಲ ಕಣ್ಣುಗಳು ಕೊಳವಾಗಿದ್ದವು.

'ಬೇರೂರದ ಸಸಿಯದು. ಹನಿ ನೀರೂ ಹನಿಸದೇ ಉಳಿಯುವುದಾದರೂ ಹೇಗೆ? ಆ ಜಾಗದಲ್ಲಿ ಘಮ್ಮೆನ್ನುವ ಸಂಪಿಗೆ ಸಸಿ ನೆಟ್ಟು ಎದೆ ತುಂಬಾ ಹೂ ಅರಳಿಸಿ ಮುಗಿಲಿಗೆ ಮುಖ ಮಾಡಿ ನಿಂತಿಲ್ಲವಾ?' ರಾಹುಲ ಸಾವಿರ ತರಹ ಅರ್ಥೈಸಿದ, ಸಮರ್ಥನೆ ಕೊಟ್ಟ.

'ಇಡೀ ಕಾರ್ಯಕ್ರಮದಲ್ಲಿ ಆಕಾಶ ದೀಪವು ನೀನು... ಹಾಡು ಪದೇ ಪದೇ ಬರ್ತಿತ್ತು ಆ ಹಾಡು ಅವಳಿಗೆ ಇಷ್ಟ, ನಿಮಗೆ ಕಾಲೇಜಲ್ಲಿ ಕಲಿಸಿದ್ದಳು ಅಂದಿದ್ರಿ...' ವನಮಾಲಳ ದನಿಯಲ್ಲಿ ಮೆಣಸ ಘಾಟಿತ್ತು.

'ಅದು ಎಫ್ ಎಂ ಚಾನಲ್ ನವರಿಗೆ ಗೊತ್ತು' ಅಂದ ಚುಟುಕಾಗಿ.

ಮನೆ ಮೌನವಾಯಿತು. ಮನೆ, ಆಫೀಸು ಬಿಟ್ಟು ಒಂದರೆ ಗಳಿಗೆ ರಾಹುಲ ಎಲ್ಲೂ ಹೋಗದೇ ವನಮಾಲಳ ಮನ ಗೆದ್ದ. ಮಾತು ಮಾತು ಮೆಲ್ಲನೆ ಮಥಿಸಿ ಸಂಸಾರ ರಾಗ ಸರಾಗವಾಯಿತು.

ಒಂದಿಷ್ಟು ದಿನಗಳು ಕಳೆದಿದ್ದವೇನೋ... ಈಗೀಗ ಈ ರಾತ್ರಿಗಳ ಮೌನದ, ದುಗುಡದ, ಅಸಹಕಾರ ಚಳವಳಿ ಶುರುವಾಗಿ ರಾಹುಲ ಕಂಗೆಟ್ಟು ಸಿಗರೇಟಿನ ಚಟಕ್ಕೆ ಬಿದ್ದಿದ್ದ. ಮದುವೆಯ ಆರಂಭದಲ್ಲಿ ದಿನವೂ ಇದ್ದ ಆಟ ನಂತರ ವಾರಕ್ಕೆ ನಾಲ್ಕು ದಿನ ಅಂದುಕೊಂಡು ಈಗೀಗ ಇಬ್ಬರೂ ಸೇರಿ ಅದಕ್ಕಾಗಿ ವೇಳಾಪಟ್ಟಿ ತಯಾರಿಸಿ ಅದರಂತೆ ಒಂದು ಒಂದು ಎರಡಾಗದೇ ಒಂದೇ ಆಗಿ ಸಾಗುತ್ತಿದ್ದರು. ಪಾವನಿ ಮೂರು ವರ್ಷದವಳಾದರೂ ಈ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರಲಿಲ್ಲ. ಆದರೆ ಇತ್ತೀಚಿಗೆ ವಾರವಾದರೂ, ಹದಿನೈದು ದಿನವಾದರೂ ಆಟವಿಲ್ಲ. ರಾಹುಲನಿಗೆ ಇದೇ ವಿಚಿತ್ರವೆನಿಸಿ ಜಗಳಕ್ಕೆ ಬೀಳುತ್ತಿದ್ದ. 'ಅದೇ ಜೀವನವಲ್ಲ, ಮಗಳ ಭವಿಷ್ಯ ನೋಡೋಣ ಸಾಕು, ಇಷ್ಟು ವರ್ಷ ತಿಂದಿಲ್ವಾ? ಎಂದಾದರೂ ನೋಡೋಣ' ಅನ್ನುವ ಅವಳ ತರ್ಕ ಅವನಿಗೆ ಜೀರ್ಣವಾಗಲಿಲ್ಲ.

'ಹೊರಗೆ ಪಾರ್ಟಿ ಮಾಡಲ್ಲ, ಕುಡಿಯಲ್ಲ, ನೈಟ್ ಲೇಟ್ ಬರಲ್ಲ, ಬೇರೆ ತಲಬು ಇಲ್ಲ, ಮನೆ–ಮಡದಿ–ಮಗಳು ಬಿಟ್ಟರೆ ಪ್ರಪಂಚವಿಲ್ಲ. ಹೀಗಿರುವಾಗ ಎತ್ತ ತಿರುಗಿದರೂ ನಲವತ್ತರ ಆಸುಪಾಸಿನ ನಾವು ಈಗಲೇ ವೈರಾಗ್ಯ ತಾಳುವುದಾ?' ಅಂತ ವಾದಿಸಿದರೂ ವನಮಾಲ ಬಳಿ ಉತ್ತರವೂ ಇಲ್ಲ, ಪರಿಹಾರವೂ ಇಲ್ಲ. ಮೌನ ಮೂಟೆಗಟ್ಟಲೆ ಹೊತ್ತಿದ್ದಳಷ್ಟೆ.

ಸಿಗರೇಟು ಬೆರಳಲ್ಲಿ ಸುಟ್ಟು ಬೂದಿಯಾಗಿ ನೆಲಕ್ಕುರುಳಿತ್ತು. ಮಧ್ಯರಾತ್ರಿ ದಾಟಿತ್ತು. ಪ್ರತಿ ರಾತ್ರಿಯೂ ಇದೇ ವಿಚಾರಕ್ಕೆ ಜಗಳ ಕಾದು ಸಾಕಾಗಿತ್ತು. ಅವನಿಗೆ ಕಾರಣ ಬೇಕಿತ್ತಷ್ಟೆ! ಕಾಮ ಅಷ್ಟು ಬೇಗ ಸಾಯುತ್ತಾ? ಹೆಣ್ಣಿಗೇ ಜಾಸ್ತಿ ಅಂತ ಎಲ್ಲೋ ಕೇಳಿದ್ದ. ನಿಜವೋ ಸುಳ್ಳೋ ಗೊತ್ತಿಲ್ಲ. ಏಳೆಂಟು ವರ್ಷಗಳಲ್ಲಿ ವಿಮುಖಿಯಾದರೆ ಹೇಗೆ? ನಾ ಸಾಕಾದೆನೆ? ಮತ್ತೆ ಮಿಂಚು ಇವಳ ತಲೆ ಹೊಕ್ಕಳೇ? ಗರ್ಭಕೋಶದ ಸಮಸ್ಯೆ ಕಾಡ್ತಿದೆಯಾ? ಹಾಸಿಗೆ ಪಥ್ಯವೇ? ನೂರಾರು ಪ್ರಶ್ನೆಗಳು ರಾಹುಲನ ತಲೆಯಲ್ಲಿ ಗಿರಕಿ.

ಅವಳಿಗೆ ಈ ವಿಚಾರಗಳೆಲ್ಲವೂ ಎದುರಿಗಿಟ್ಟರೂ ಮೌನ ಮೌನ! ಇವತ್ತೇನಾದರೂ ಸರಿ. ಸರಿಯಾದ ಕಾರಣ ತನಗೆ ಬೇಕೇ ಬೇಕು ಅಂತ ಮತ್ತೆ ರೂಮ್ ಹೊಕ್ಕ ರಾಹುಲ್. ವನಮಾಲ ಮಲಗಿದ್ದಳು. ಮಂಚದ ತುದಿಗೆ ಕೂತ. ಅವಳನ್ನು ಭುಜ ಹಿಡಿದು ಅಲುಗಿಸಿದ. ಅರೆಕ್ಷಣದ ನಂತರ ಕಣ್ ಬಿಟ್ಟಳು. ಕಣ್ಣು ಅತ್ತು ಅತ್ತು ಬಾತಿದ್ದವು. ಒಂದು ರಾತ್ರಿಯಲ್ಲ, ದಿನಾ ರಾತ್ರಿ ರಾಹುಲನ ಕಿರಿಕಿರಿಗೆ, ಮಾತಿಗೆ, ಸಿಟ್ಟಿಗೆ ಮನೆಯ ವಸ್ತುಗಳನ್ನು ಪುಡಿಮಾಡಿ, ಮಗಳನ್ನು ಮುದ್ದಿಸದೇ ಇರುತ್ತಿದ್ದಳು.

ಏನೆಂಬಂತೆ ನೋಡಿದಳು.